ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೆ, ಬೆಳೆ ವಿಮೆ ವಿಚಾರದಲ್ಲಿ ಬದಲಾವಣೆ ಅತ್ಯಾವಶ್ಯಕ, ಈಗಿನ ಬೆಳೆ ವಿಮೆಯಿಂದ ಏನೂ ಪ್ರಯೋಜನವಿಲ್ಲವೆಂದು ಮಾನ್ಯ ಕೃಷಿ ಸಚಿವರು ತಿಳಿಸಿದ್ದರು.

ಶ್ರೀ ಸಿ. ಬೈರೇಗೌಡ : ಇದರಿಂದ ಪೂರ್ತಿ ಪ್ರಯೋಜನ ಇಲ್ಲವೆಂದಲ್ಲ. ಇಂತಿಷ್ಟು ಇಳುವಳಿ ಬರಬೇಕೆಂದು ಇದೆ. ಅಷ್ಟು ಇಳುವರಿ ಬಂದರೆ ವಿಮೆ ಸಿಗುವುದಿಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಅಂದರೆ ಒಂದು ತಾಲ್ಲೂಕಿನಲ್ಲಿ ಸಾಮೂಹಿಕವಾಗಿ ಪೂರ್ಣ ಬೆಳೆ ನಾಶವಾದರೆ ಮಾತ್ರ ಈ ವಿಮೆಯಿಂದ ಪ್ರಯೋಜನ ಸಿಗುವಂಥದ್ದು. ಬಹಳ ಮುಖ್ಯವಾಗಿ ಬೆಳೆ ವಿಮೆಗೆ ಅಣೆವಾರಿ ಪದ್ಧತಿ ಬೇಕಾಗಿರುವಂಥದ್ದು. ಕಂದಾಯ ಇಲಾಖೆಯವರು ಅಣೆವಾರಿ ಮಾಹಿತಿ ಕೊಡಬೇಕು. ಬೆಳೆ ನಾಶವಾದ ಬಗ್ಗೆ ಪರಿಶೀಲಿಸಲು ನಾವು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗೆ ಹೋಗಿದ್ದಾಗ ಕಂದಾಯ ಇಲಾಖೆಯವರು ಗುಲ್ಬರ್ಗಾದಲ್ಲಿ ಅಣೇವಾರಿ ಮಾಹಿತಿ ಕೊಟ್ಟಿದ್ದಾರೆ ಆದರೆ ಬೀದರ್ ಜಿಲ್ಲೆಯಲ್ಲಿ ಅಣೇವಾರಿ ಮಾಹಿತಿಯನ್ನು ಕೊಟ್ಟಿಲ್ಲ. ಇಲ್ಲಿ ನನ್ನ ಪ್ರಶ್ನೆ ಏನೆಂದರೆ - ಇಡೀ ರಾಜ್ಯದಲ್ಲಿ ಹಿಂಗಾರು ಬೆಳೆ ಮತ್ತು ಮುಂಗಾರು ಬೆಳೆಯಲ್ಲಿ ಎಷ್ಟರಮಟ್ಟಿಗೆ ನಷ್ಟವುಂಟಾಗಿದೆ ಎಂಬುದರ ಬಗ್ಗೆ ಪಹಣಿ ಬರೆಯತಕ್ಕಂಥ ವಿಷಯದಲ್ಲಿ ಕೃಷಿ ಇಲಾಖೆ, ನೀರಾವರಿ ಇಲಾಖೆ ಮತ್ತು ಕಂದಾಯ ಇಲಾಖೆಯವರು ಜಾಯಿಂಟ್ ಆಗಿ ಕೆಲಸ ಮಾಡಿ ಎಷ್ಟೆಷ್ಟು ನಷ್ಟವಾಗಿದೆ ಎನ್ನತಕ್ಕಂಥದ್ದನ್ನು ಗಮನಕ್ಕೆ ತಂದರೆ ವಿಮೆ ಬರಲಿಕ್ಕೆ ಬಹಳ ಅನುಕೂಲವಾಗುತ್ತದೆ. ದಯವಿಟ್ಟು ಆ ಕೆಲಸವನ್ನು ಮಾಡಿಸಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಮೊದಲೇ ಹೇಳಿದ ಹಾಗೆ ನಿಗದಿಯಾದ ಪ್ರತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಇಂತಿಷ್ಟು ಕ್ರಾಪ್ ಕಟ್ಟಿಂಗ್ ಎಕ್ಸ್‌ಪೆರಿಮೆಂಟ್ಸನ್ನು ಮಾಡಬೇಕು ಎನ್ನುವಂಥದ್ದು ಇದೆ. ಇದನ್ನು ಅಂಕಿಅಂಶಗಳ ಇಲಾಖೆಯವರು ಮಾಡುತ್ತಾರೆ. ಇದನ್ನು ಮತ್ತು ಮಾನ್ಯ ಪುಟ್ಟಣ್ಣಯ್ಯನವರು ತಿಳಿಸಿದ ಹಾಗೆ ಅಣೇವಾರಿ ಇವರೆಡನ್ನೂ ಸೇರಿಸಿ ನಾವು ನಿಗದಿಪಡಿಸಿರತಕ್ಕಂಥ ಸೂತ್ರವಾಗಿರುತ್ತದೆ. ಯಾವ ಮಟ್ಟದಲ್ಲಿ ಬೆಳೆ ಆಗಬೇಕೋ ಆ ಮಟ್ಟಕ್ಕಿಂತ ಕಡಿಮೆ ಬೆಳೆ ಬಂದರೆ ವಿಮೆ ಸಿಗುತ್ತದೆ. ಇಲ್ಲದಿದ್ದರೆ ವಿಮೆ ಸಿಗುವುದಿಲ್ಲ. ಈ ಬದಲಾವಣೆ ಮಾಡಬೇಕು ಎನ್ನುವಂಥದ್ದು ನಮ್ಮ ಅಭಿಪ್ರಾಯ ಕೂಡ ಹೌದು, ಮತ್ತು ರಾಜ್ಯಸರ್ಕಾರದ ಅಭಿಪ್ರಾಯ ಕೂಡ ಆಗಿರುತ್ತದೆ. ಅದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ.

## ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ.

187 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ದೇವಸ್ಥಾನಗಳು ಮುಜರಾಯಿ ಇಲಾಖೆಗೆ ಸೇರಿವೆ (ವಿವರ ನೀಡುವುದು);*

ಆ) *ಮುಜರಾಯಿ ದೇವಸ್ಥಾನಗಳ ಪುರೋಹಿತರುಗಳಿಗೆ ನಿಗಧಿಪಡಿಸಲಾಗಿರುವ ಕನಿಷ್ಠ ವೇತನ ಎಷ್ಟು, ಇವರುಗಳ ವೇತನ ಸಾರಿಗೆ ಭತ್ಯೆ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ರಾಜ್ಯದಲ್ಲಿ 43,217 ದೇವಾಲಯಗಳಿವೆ ಹಾಗೂ ಧಾರ್ಮಿಕ ಸಂಸ್ಥೆಗಳು ಸೇರಿವೆ.

ಆ) ಆಯಾಯ ದೇವಸ್ಥಾನಗಳ ಆದಾಯಕ್ಕೆ ಅನುಗುಣವಾಗಿ ಅರ್ಚಕರು ಮತ್ತು ಇತರ ಸಿಬ್ಬಂದಿಯವರಿಗೆ ಸಂಭಾವನೆ/ವೇತನ ನಿಗಧಿಪಡಿಸಲಾಗುತ್ತದೆ. ಇಲ್ಲಿ ಕನಿಷ್ಠ ವೇತನ ಎಂದು ನಿಗಧಿಪಡಿಸಲು ಬರುವುದಿಲ್ಲ. ಆದರೆ ದೇವಸ್ಥಾನದ ಆದಾಯದಲ್ಲಿ ಹೆಚ್ಚಳವಾದಾಗ ಅರ್ಚಕರ ಹಾಗೂ ಇತರ ಸಿಬ್ಬಂದಿಗಳ ಸಂಭಾವನೆಯನ್ನು ಹೆಚ್ಚಿಸಲಾಗುತ್ತದೆ. ಮೂರು ವರ್ಷಗಳಿಗೊಮ್ಮೆ ಸ್ಕೇಲ್ ನಿಗಧಿಮಾಡುವಾಗ ಪರಿಷ್ಕರಿಸಿ ಹೆಚ್ಚಿಸಲಾಗುತ್ತದೆ.

**ಅನುಬಂಧ - ಅ**

| ಕ್ರ. ನಂ. | ಜಿಲ್ಲೆಯ ಹೆಸರು | ಮುಜರಾಯಿ ದೇವಸ್ಥಾನ ಸಂಖ್ಯೆ |
|---|---|---|
| 1 | 2 | 3 |
| 1) | ಬೆಂಗಳೂರು ನಗರ | 1127 |
| 2) | ಬೆಂಗಳೂರು ಗ್ರಾಮಾಂತರ | 2241 |
| 3) | ಮೈಸೂರು | |
| 4) | ಚಾಮರಾಜನಗರ | 1769 |
| 5) | ಮಂಡ್ಯ | 1962 |
| 6) | ಕೋಲಾರ | 2453 |
| 7) | ತುಮಕೂರು | 2576 |
| 8) | ಹಾಸನ | 2490 |
| 9) | ಶಿವಮೊಗ್ಗ | 1503 |
| 10) | ಚಿತ್ರದುರ್ಗ | |
| 11) | ದಾವಣಗೆರೆ | 504 |
| 12) | ಚಿಕ್ಕಮಗಳೂರು | 2093 |
| 13) | ಕೊಡಗು | 7 |
| 14) | ದಕ್ಷಿಣ ಕನ್ನಡ | |
| 15) | ಉಡುಪಿ | 1668 |

| 1 | 2 | 3 | |
|---|---|---|---|
| 16) | ಬೀದರ್ | 1109 | |
| 17) | ರಾಯಚೂರು | | |
| 18) | ಕೊಪ್ಪಳ | 4779 | |
| 19) | ಗುಲ್ಬರ್ಗಾ | 3472 | |
| 20) | ಬೆಳಗಾಂ | 4956 | ಬಿ.ಪಿ.ಟಿ. ಕಾಯ್ದೆ ಅಡಿಯಲ್ಲಿ ನೋಂದಾಯಿ-ಸಲ್ಪಟ್ಟ ಸಂಸ್ಥೆಗಳು |
| 21) | ಬಿಜಾಪುರ | | |
| 22) | ಬಾಗಲಕೋಟೆ | 2281 | |
| 23) | ಧಾರವಾಡ | | |
| 24) | ಗದಗ | 4096 | |
| 25) | ಹಾವೇರಿ | | |
| 26) | ಉತ್ತರ ಕನ್ನಡ | 1076 | |
| | ಒಟ್ಟು | 43217 | |

11.00 ಎ. ಎಂ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮುಜರಾಯಿ ದೇವಸ್ಥಾನಗಳ ಪುರೋಹಿತರುಗಳಿಗೆ ನಿಗದಿಪಡಿಸಲಾಗಿರುವ ಕನಿಷ್ಠ ವೇತನ ಎಷ್ಟು ಎಂದು ಕೇಳಿದ್ದೇನೆ. ಅದಕ್ಕೆ 'ಆಯಾಯ ದೇವಸ್ಥಾನಗಳ ಆದಾಯಕ್ಕೆ ಅನುಗುಣವಾಗಿ ಕೊಡಲಾಗುತ್ತಿದೆ' ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆಯಾಯ ದೇವಸ್ಥಾನಗಳ ಆದಾಯಕ್ಕೆ ಅನುಗುಣವಾಗಿ ಎಂದರೆ ಯಾವ ತರಹದ ಆದಾಯದ ಮೇಲೆ ಕನಿಷ್ಠ ವೇತನವನ್ನು ಕೊಡುತ್ತಿದ್ದಾರೆ? ಇದನ್ನು ಸ್ಪಷ್ಟಪಡಿಸಬೇಕು. ನನಗೆ ತಿಳಿದ ಪ್ರಕಾರ ಕೆಲವು ಕಡೆ ಕನಿಷ್ಠ ಸಂಬಳ ಅಂದರೆ ಅವರು ತೆಗೆದುಕೊಳ್ಳುವಂಥ ಕನಿಷ್ಠ ಸಂಬಳವನ್ನು ನೋಡಿದಾಗ ನಮ್ಮ ಮನಸ್ಸಿಗೆ ಬಹಳ ನೋವು ಆಗುತ್ತದೆ. ಆದ್ದರಿಂದ ಮುಜರಾಯಿ ದೇವಸ್ಥಾನಗಳಲ್ಲಿನ ಅರ್ಚಕರಿಗೆ 'ಕನಿಷ್ಠ' ಸಂಬಳ ಎಷ್ಟು ಎನ್ನುವುದನ್ನು ದಯಮಾಡಿ ಹೇಳಬೇಕು.

ಡಾ|| ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮುಜರಾಯಿ ಇಲಾಖೆ ರಾಜ್ಯ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಕೆಲವು ಆದಾಯ ಇರತಕ್ಕಂಥ ದೇವಸ್ಥಾನಗಳಿಗೆ, ಅಲ್ಲಿ ಕೆಲಸ ಮಾಡತಕ್ಕಂಥ ಅರ್ಚಕರು ಮತ್ತು ಸಿಬ್ಬಂದಿ ವರ್ಗದವರಿಗೆ ಇಂತಿಷ್ಟು ಕನಿಷ್ಠ ವೇತನವೆಂದು ನಿಗದಿಪಡಿಸಿದ್ದೇವೆ. ಆದಾಯ ಇಲ್ಲದೇ ಇರತಕ್ಕಂಥ ದೇವಸ್ಥಾನಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಕನಿಷ್ಠ ವೇತನ ನಿಗದಿಪಡಿಸಿಲ್ಲ. ಈ ವೇತನ ಮುಂತಾದವುಗಳನ್ನು ನಿಗದಿಪಡಿಸುವ ಸಲುವಾಗಿ ಒಂದು 'ಏಕರೂಪ ಶಾಸನವನ್ನು' ತರಲಿದ್ದು ಇದು ಅಂತಿಮ ರೂಪದಲ್ಲಿದೆ. ಈ ಶಾಸನ ಬಂದರೆ 'ಕಾಮನ್

ಪೂಲ್ ಫಂಡ್' ಎಂದು ಏನು ಬರುತ್ತದೆ ಅದನ್ನು ಆದಾಯ ಇರತಕ್ಕಂಥ ದೇವಸ್ಥಾನಗಳಿಗೆ ಇಂತಿಷ್ಟು ಎಂದು ನಿಗದಿಪಡಿಸಬಹುದು. ಆದರೆ ಆದಾಯ ಹೆಚ್ಚಿಗೆ ಇರತಕ್ಕಂಥ ಮೇಜರ್ ಟೆಂಪಲ್ಸ್‌ನಲ್ಲಿ ಕೆಲಸ ಮಾಡತಕ್ಕಂಥ ಅರ್ಚಕರು ಮತ್ತು ಸಿಬ್ಬಂದಿಗೆ ಈಗ ಸರ್ಕಾರ ಇತರೆ ಸಿಬ್ಬಂದಿಗೆ ಹೇಗೆ ಕನಿಷ್ಟ ವೇತನ ಕೊಡುತ್ತದೋ ಅದೇ ಪ್ರಕಾರ ಆ ವೇತನವನ್ನು ಅವರಿಗೂ ಕೊಡುತ್ತಿದೆ. ಈ ಸಣ್ಣ ದೇವಸ್ಥಾನಗಳಲ್ಲಿ ಕೆಲಸ ಮಾಡತಕ್ಕಂಥ ಅರ್ಚಕರಿಗಾಗಲಿ, ಸಿಬ್ಬಂದಿಗಾಗಲಿ ಕನಿಷ್ಟ ವೇತನ ನಿಗದಿಪಡಿಸಿಲ್ಲ. ಈಗ ಏಕರೂಪ ಶಾಸನ ಬಂದಮೇಲೆ ಕಾಮನ್ ಪೂಲ್ ಫಂಡ್‌ನಿಂದ ಅವರಿಗೆ ಇಂತಿಷ್ಟು ಹಣ ಎಂದು ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಏಕರೂಪದ ಶಾಸನವನ್ನು ತರುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಶಾಸನವನ್ನು ಯಾವಾಗ ತರುತ್ತೀರಿ? ಆ ಶಾಸನವನ್ನು ಯಾವಾಗ ತರಬೇಕೆಂದಿದ್ದೀರಿ? ಈ ಅಧಿವೇಶನ ಮುಗಿಯುವುದರೊಳಗಾಗಿ ಆ ಶಾಸನವನ್ನು ತರುತ್ತೀರೋ 2ನೆಯದಾಗಿ, ಒಂದು ಮುಜರಾಯಿ ದೇವಸ್ಥಾನದಲ್ಲಿ ಕನಿಷ್ಟ ವೇತನವೆಂದು ಕೇವಲ 1 ರೂಪಾಯಿ 50 ಪೈಸೆಯನ್ನು ಕೊಡುತ್ತಿದ್ದಾರೆ. ಇದನ್ನು ನಾನು ತಿಳಿದುಕೊಂಡು ಬಂದು ಇಲ್ಲಿ ಮಾತನಾಡುತ್ತಿದ್ದೇನೆ. ಇದಕ್ಕೆ ಸಂಬಳವೆಂದು ಕರೆಯುವುದಕ್ಕೆ ಸಾಧ್ಯವೇ? ಆದ್ದರಿಂದ ಈ ಸಂಬಳಸಾರಿಗೆ ವ್ಯವಸ್ಥೆಯನ್ನು ಹೆಚ್ಚಿಸುವುದಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಏನು ಮಾಡಿದ್ದೀರಿ? ಈಗ ಶ್ರೀಮಂತ ದೇವಸ್ಥಾನದಲ್ಲಿ ಕೆಲಸ ಮಾಡತಕ್ಕಂಥವರಿಗೆ ಜಾಸ್ತಿ ಸಂಬಳ, ಬಡ ದೇವಸ್ಥಾನಗಳು ಅಂದರೆ ಕಡಿಮೆ ಆದಾಯ ಬರುವಂಥ ದೇವಸ್ಥಾನಗಳಲ್ಲಿ ಕೆಲಸ ಮಾಡುವಂಥವರಿಗೆ ಕಡಿಮೆ ವೇತನ ಎನ್ನುವಂಥದ್ದು ಸರಿಯಲ್ಲ. ಎಲ್ಲಾ ದೇವಸ್ಥಾನಗಳಲ್ಲೂ ಕೆಲಸ ಮಾಡತಕ್ಕಂಥ ಅರ್ಚಕರು ಮತ್ತು ಸಿಬ್ಬಂದಿವರ್ಗದವರಿಗೆ ಸಂಬಳ ಕೊಡುವಾಗ ಅದರಲ್ಲಿ ಸಮಾನತೆ ಇರಬೇಕು. ಅದರ ಬಗ್ಗೆ ತಾವು ಏನು ಮಾಡಿದ್ದೀರಿ? ದಯಮಾಡಿ ಅದನ್ನು ಹೇಳಬೇಕು.

ಉಪಾಧ್ಯಕ್ಷರು : 'ಏಕರೂಪ ಶಾಸನವನ್ನು' ಯಾವಾಗ ತರುತ್ತೀರಿ ಎನ್ನುವುದನ್ನು ಸದನಕ್ಕೆ ಹೇಳಿ.

ಶ್ರೀಮತಿ ಬಿ. ಟಿ. ಲಲಿತಾನಾಯಕ್ : ಮಾನ್ಯ ಉಪಾಧ್ಯಕ್ಷರೆ, ಒಂದೊಂದು ದೇವಸ್ಥಾನಗಳಲ್ಲಿ ಒಂದು ದಿವಸಕ್ಕೆ ಸುಮಾರು ಒಂದು ಸಾವಿರ ರೂಪಾಯಿ ವರೆಗೆ ಆದಾಯ ಇರಬಹುದು, ಇಂಥ ದೇವಸ್ಥಾನಗಳಿಗೆ ಹೆಚ್ಚಿಗೆ ಜನ ಹೋಗುತ್ತಾರೆ. ಈ ದೇವತೆಗಳ ದೇವಸ್ಥಾನ ಅಂದರೆ ಕ್ಷುದ್ರದೇವತೆಗಳು ಎಂದು ಏನು ಹೇಳುತ್ತೇವೆ ಆ ದೇವಸ್ಥಾನಗಳಿಗೆ ಸಾಮಾನ್ಯವಾಗಿ ಯಾರೂ ಹೋಗುವುದಿಲ್ಲ ಇದರಿಂದ ಅಲ್ಲಿ ವರಮಾನ ಇರುವುದಿಲ್ಲ. ಕ್ಷುದ್ರದೇವತೆಗಳ ದೇವಸ್ಥಾನಕ್ಕೆ ವರಮಾನ ಇರುವುದಿಲ್ಲ ಆದರೆ ಇತರೇ ದೇವರ ದೇವಸ್ಥಾನಗಳಿಗೆ ವರಮಾನವಿರುತ್ತದೆ. ಸಾವಿರಾರು ರೂ.ಗಳ ಕಾಣಿಕೆ ಬರುತ್ತದೆ. ಈಗ ಸಮಾನ ಏಕರೂಪದ ಶಾಸನ ತರಲಾಗುವುದು ಎಂದು ಹೇಳುತ್ತಿದ್ದೇವೆ ಅಲ್ಲವೇ; ಇದರಿಂದ ನಿಜವಾಗಿ ಸಮಾನತೆ ಆಗುತ್ತದೆಯೇ?

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನಮ್ಮ ದೇಶದಲ್ಲಿ ಈಗ ಶ್ರೀಮಂತ ದೇವರು, ಬಡ ದೇವರು ಎಂದು ಇದ್ದಾರೆ. ಬಡ ದೇವರಿಗೆ ಪೂಜಾರಿಯೂ ಇಲ್ಲ, ಸಂಬಳ ಇಲ್ಲ.

ಶ್ರೀಮಂತ ದೇವರಿಗೆ ಪೂಜೆ ಮಾಡತಕ್ಕಂಥ ಪೂಜಾರಿಗೆ ಸಂಬಳ ಇದೆ, ಆ ಶ್ರೀಮಂತ ದೇವರಿಗೆ ಅಂಥ ಹಣದ ಅವಶ್ಯಕತೆ ಇಲ್ಲ. ಅವರಿಗೆ ಸರ್ಕಾರ ಏಕೆ ಕೊಡಬೇಕು? ದೇವರು ಸರ್ವಂತರ್ಯಾಮಿ, ಸರ್ವಶಕ್ತಿ. ಆದರೂ ಪೂಜೆ ಮಾಡುವವರಿಗೆ ಈ ಸಂಬಳ ಏಕೆ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಡಾ|| ಎಂ. ಶಂಕರ್‌ನಾಯಕ್ : ಮಾನ್ಯ ಉಪಾಧ್ಯಕ್ಷರೆ, ಈಗ ಹೆಚ್ಚಿಗೆ ಆದಾಯ ಬರತಕ್ಕಂಥ ದೇವಸ್ಥಾನಗಳನ್ನು ಬಿಟ್ಟು ಬಾಕಿ ದೇವಸ್ಥಾನಗಳು ಏನು ಇವೆ, ಅದರ ಆದಾಯಕ್ಕೆ ಅನುಗುಣವಾಗಿ ಅವರ ವೇತನವನ್ನು ಈಗ ಫಿಕ್ಸ್ ಮಾಡಲಾಗಿದೆ. ಕೆಲವು ಆದಾಯ ಇಲ್ಲದೆ ಇರತಕ್ಕಂಥ ಬಹಳಷ್ಟು ದೇವಸ್ಥಾನಗಳಿವೆ. ಕೆಲವು ಜಮೀನು ಇರತಕ್ಕಂಥ ದೇವಸ್ಥಾನಗಳು ಆ ಜಮೀನನ್ನು ಮುಟ್ಟುಗೋಲು ಹಾಕಿ ತಸ್ತಿಕ್ ಎಂದು ಏನು ಮಾಡಿದ್ದಾರೆ ಅದರಲ್ಲಿ ಬರತಕ್ಕಂಥ ಹಣದಲ್ಲಿ ಪೂಜೆಗೆ ಹಣ ಕೊಡುತ್ತಿದ್ದಾರೆ. ಈ ಸಣ್ಣ ದೇವಸ್ಥಾನಗಳಿಗೆ ಕನಿಷ್ಠ ವೇತನ ಇಷ್ಟು ಎಂದು ನಿಗದಿ ಮಾಡಲಿಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದ ಮಾಡಿಲ್ಲ. ಏಕೆಂದರೆ ಅಲ್ಲಿ ಬರತಕ್ಕಂಥ ಆದಾಯ ಬಹಳ ಕಡಿಮೆ. ಈಗ ನಾವು ಕಾಮನ್ ಪೂಲ್ ಫಂಡ್ ಎಂದು ತಂದರೆ ಎಲ್ಲಾ ಆದಾಯವನ್ನು ಕ್ರೋಢೀಕರಿಸಿ ಮುಜರಾಯಿ ಇಲಾಖೆಯಡಿಯಲ್ಲಿ ಬರತಕ್ಕಂಥ ಎಲ್ಲಾ ದೇವಸ್ಥಾನಗಳಿಗೂ ಇಂತಿಷ್ಟು ಹಣ, ವೇತನಕ್ಕೆ, ಸಿಬ್ಬಂದಿಗೆ, ಪೂಜೆಗೆ ಇಂತಿಷ್ಟು ಎಂದು ನಿಗದಿ ಮಾಡಲಾಗುವುದು. ಆ ಶಾಸನ ವಿಧಾನಪರಿಷತ್ತಿನಲ್ಲಿ ಬಂದಿತ್ತು. ಕೆಲವು ಕಾರಣದಿಂದ ಅದು ಜಂಟಿಸದನ ಸಮಿತಿಗೆ ರೆಫರ್ ಆಗಿದೆ. ಕಾಮನ್ ಪೂಲ್ ಫಂಡ್ ಶಾಸನ ಬಂದಾಗ ಎಲ್ಲಾ ದೇವಸ್ಥಾನಗಳಿಗೂ ಸಮಾನವಾಗಿ ಆದಾಯವನ್ನು ಹಂಚತಕ್ಕಂಥ ಒಂದು ಅವಕಾಶವಿರುತ್ತದೆ.

ಉಪಾಧ್ಯಕ್ಷರು : ಆ ಜಂಟಿ ಸದನ ಸಮಿತಿಗೆ ಟೈಮ್ ನಿಗದಿ ಮಾಡಿಲ್ಲವೇ? ಇನ್ನು ಎಷ್ಟು ದಿವಸದೊಳಗೆ ಆ ಸಮಿತಿ ವರದಿಯನ್ನು ಕೊಡುತ್ತದೆ?

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 'ಏಕರೂಪ ಶಾಸನ' ತರಲಿಕ್ಕೆ ಜಂಟಿಸದನ ಸಮಿತಿಯನ್ನು ನೇಮಕ ಮಾಡಿದ್ದೇವೆ. ಬಹುಶಃ ಈಗ ಅದು ಅಂತಿಮ ರೂಪಾದಲ್ಲಿದೆ. ಕೆಲವು ದಿವಸಗಳ ಹಿಂದೆ ಒಂದು ಸಭೆಯನ್ನು ನಡೆಸಿದ್ದಾರೆ. ಬಹುಶಃ ಈ ಅಧಿವೇಶನದಲ್ಲಿ ಅದನ್ನು ಮಂಡಿಸುವವರಿದ್ದೇವೆ. ಅದರಲ್ಲಿ ಒಂದು ವಿಧಿಯನ್ನು ಅಳವಡಿಸಿದ್ದೇವೆ. ದೇವಸ್ಥಾನಗಳಲ್ಲಿ ಅರ್ಚಕರಿಗೆ ಸಂಬಳವನ್ನು ಕೊಡಲಿಕ್ಕೆ ಒಂದು 'ಪೂಲ್ ಫಂಡ್' ಎಂದು ನಿರ್ಮಾಣ ಮಾಡಿ ಅದರಲ್ಲಿ ಕ್ಯಾಟಗರಿ-'ಎ' ಕ್ಯಾಟಗರಿ 'ಬಿ' ಮತ್ತು ಕ್ಯಾಟಗರಿ 'ಸಿ' ಎಂದು ದೇವಸ್ಥಾನಗಳನ್ನು ವಿಂಗಡಣೆ ಮಾಡಿ ಅದಕ್ಕನುಗುಣವಾಗಿ ಸಂಬಳವನ್ನು ಕೊಡಲಿಕ್ಕೆ ಇರತಕ್ಕಂಥದ್ದಕ್ಕೆ ನಿಯಮಗಳ ಅಡಿಯಲ್ಲಿ ಆ ಒಂದು ಶಾಸನವನ್ನು ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ ಮತ್ತು ಈ ಅಧಿವೇಶನ ಮುಗಿಯುವುದರೊಳಗಾಗಿ ಅದನ್ನು ಮಂಡಿಸುವವರಿದ್ದೇವೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಮಗೆಲ್ಲಾ ಗೊತ್ತಿರುವ ಹಾಗೆ ತಿರುಪತಿ ದೇವಸ್ಥಾನಕ್ಕೆ ಕರ್ನಾಟಕದಿಂದ ಭಕ್ತರು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಹೋಗುತ್ತಿದ್ದಾರೆ ಮತ್ತು ತಿರುಪತಿ

ದೇವಸ್ಥಾನಕ್ಕೆ ಇತಿಹಾಸದಲ್ಲಿ ಕರ್ನಾಟಕದ ಕೊಡುಗೆ ಅಪಾರವಾಗಿದೆ. ಮೈಸೂರಿನ ಮಹಾರಾಜರು ಅರಮನೆಯಿಂದ ಕೊಡುಗೆಗಳನ್ನು ಕೊಟ್ಟಿದ್ದಾರೆ. ತಿರುಪತಿಯಲ್ಲಿರತಕ್ಕಂಥ ದೊಡ್ಡ ದೀಪ ಕರ್ನಾಟಕದ್ದು, ಹಿಂದೆ ಶ್ರೀ ಗುಂಡೂರಾವ್ ಅವರು ಇದ್ದಾಗ ತಿರುಪತಿಗೆ ಕೊಡುಗೆಯಾಗಿ ಮರಗಳನ್ನು ಕೊಟ್ಟಿದ್ದಾರೆ, ಅನೆ ಕೊಟ್ಟಿದ್ದಾರೆ. ಹೀಗೆ ಹಲವಾರು ಕೊಡುಗೆಗಳನ್ನು ಕರ್ನಾಟಕದಿಂದ ತಿರುಪತಿ ದೇವಸ್ಥಾನಕ್ಕೆ ಕೊಡಲಾಗಿದೆ. ಆದರೆ ಅಲ್ಲಿರತಕ್ಕಂಥ ಆ ವ್ಯವಸ್ಥಾಪಕ ಸಮಿತಿಯಲ್ಲಿ ಕರ್ನಾಟಕದವರನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆ. ಅಲ್ಲಿರತಕ್ಕಂಥ ವ್ಯವಸ್ಥಾಪಕ ಸಮಿತಿಗೆ ಕರ್ನಾಟಕದವರನ್ನು ನೇಮಕ ಮಾಡಬೇಕು. ಮತ್ತು ಕರ್ನಾಟಕದಿಂದ ಅಲ್ಲಿಗೆ ಹೋಗತಕ್ಕಂಥ ಭಕ್ತರಿಗೆ ಎಲ್ಲಾ ರೀತಿಯ ಸೌಲಭ್ಯವನ್ನು ಕೊಡತಕ್ಕಂಥ ವ್ಯವಸ್ಥೆಯಾಗಬೇಕು. ಇವೆರಡೂ ಆಗದಿರುವುದರಿಂದ ಅಲ್ಲಿಗೆ ಕರ್ನಾಟಕದಿಂದ ಹೋಗತಕ್ಕಂಥ ಭಕ್ತರನ್ನು ಒಂದು ರೀತಿ ಕಡೆಗಾಣಿಸತಕ್ಕಂಥ ವ್ಯವಸ್ಥೆ ಅಲ್ಲಿ ನಡೆಯುತ್ತಿದೆ. ಆಂಧ್ರಸರ್ಕಾರದ ಜೊತೆ ಮಾತನಾಡಿ ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳುತ್ತದೆ ಎನ್ನುವುದನ್ನು ದಯಮಾಡಿ ಹೇಳಬೇಕು.

ಶ್ರೀಮತಿ ಬಿ. ಟಿ. ಲಲಿತಾನಾಯಕ್ : ಮಾನ್ಯ ಉಪಾಧ್ಯಕ್ಷರೆ, ದೇವಸ್ಥಾನಗಳಲ್ಲಿ ಎಲ್ಲರಿಗೂ ಪೂಜೆ ಮಾಡುವ ಹಕ್ಕು ಇದೆಯೆನ್ನುವುದನ್ನು ಬಹುಶಃ ತಾವೂ ಕೂಡ ಒಪ್ಪಿಕೊಳ್ಳುತ್ತೀರೆಂದು ಭಾವಿಸುತ್ತೇನೆ. ದೇವಸ್ಥಾನಗಳಲ್ಲಿ ಪೂಜೆ ಮಾಡುವ ಅವಕಾಶವನ್ನು ಕೆಲವು ನಿರ್ದಿಷ್ಟವಾದಂಥ ಜಾತಿಯವರಿಗೆ ಮಾತ್ರ ಕೊಡುತ್ತಾರೆ. ಏಕೆ? ಮಂತ್ರ ಪಠಿಸುವುದು, ಪೂಜೆ ಮಾಡುವುದನ್ನು ಕಲಿತಿರತಕ್ಕಂಥ ಮಹಿಳೆಯರು ಇದ್ದಾರೆ. ಅವರಿಗೂ ಕೂಡ ದೇವಸ್ಥಾನಗಳಲ್ಲಿ ಅರ್ಚಕರಾಗಿ ಕೆಲಸ ಮಾಡಲು ನೇಮಿಸಬೇಕು.

ಡಾ|| ಎಂ. ಶಂಕರ್‌ನಾಯಕ್ : ನಿರ್ದಿಷ್ಟವಾದ ಜಾತಿಗೆ ಎಂದೇನೂ ಈಗ ಇಲ್ಲ. ಯಾವ ಜಾತಿಗಾದರೂ ಕೊಡಬಹುದು. ಸ್ವಲ್ಪ ಸಂಸ್ಕೃತ ಕಲಿತಿರುವವರಿಗೆ ಕೊಡುವ ಅವಕಾಶ ಇದೆ, ಈಗಲೂ ಕೊಡುತ್ತಿದ್ದಾರೆ. ಆದರೆ, ಶ್ರೀ ವಾಟಾಳ್ ನಾಗರಾಜ್‌ರವರು ತಿರುಪತಿ ದೇವಸ್ಥಾನದ ಬಗ್ಗೆ ಏನು ಕೇಳಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಅದರ ಬಗ್ಗೆ ಬೇರೆ ಪ್ರಶ್ನೆ ಕಳುಹಿಸಿದರೆ ಅವರ ಜೊತೆ ಮಾತನಾಡುತ್ತೇನೆ. ಏಕೆಂದರೆ, ಅವರು ಕೇಳಿರುವ ಪ್ರಶ್ನೆ ಬೇರೆ. ಅದರ ಬಗ್ಗೆ ಮಾತ್ರ ನನ್ನ ಬಳಿ ಮಾಹಿತಿ ಇದೆ. ಅದರ ಬಗ್ಗೆ ತಿಳಿಸಿ, ಪರಿಶೀಲಿಸುತ್ತೇವೆ.

ಉಪಾಧ್ಯಕ್ಷರು : ತರಿಸಿಕೊಡುತ್ತಾರೆ. ನೀವು ಕೇಳಿದ ಪ್ರಶ್ನೆ ಬೇರೆ.

ಶ್ರೀ ವಾಟಾಳ್ ನಾಗರಾಜ್ : ಎನ್‌ಡೋಮೆಂಟ್ ಕಮಿಷನರ್‌ರವರು ಇಲ್ಲೇ ಇದ್ದಾರೆ. ಇದು ಬಹಳ ಪ್ರಾಮುಖ್ಯವಾದುದು. ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಅಲ್ಲಿ. ಆ ಬಗ್ಗೆ ಆಂಧ್ರ ಪ್ರದೇಶ ಸರ್ಕಾರದೊಡನೆ ಮಾತನಾಡಿ.

ಶ್ರೀ ಎಸ್. ಎಸ್. ಪಾಟೀಲ್ : ಶ್ರೀ ವಾಟಾಳ್ ನಾಗರಾಜ್‌ರವರು ಹಿಂದೆ ಈ ವಿಷಯ ಕೇಳಿದ್ದರು, ಆಗ ಮುಜರಾಯಿ ಸಚಿವರು ಉತ್ತರಿಸಿದ್ದರು.

ಡಾ|| ಎಂ. ಶಂಕರನಾಯಕ್ : ಅಲ್ಲಿ ಹಿಂದಿನಿಂದಲೂ ಕರ್ನಾಟಕದ ಒಬ್ಬ ಸದಸ್ಯರು ಇದ್ದಾರೆ. ಕರ್ನಾಟಕವನ್ನು ಪ್ರತಿನಿಧಿಸುವವರೊಬ್ಬರು ಈಗಲೂ ಇದ್ದಾರೆ. ಒಬ್ಬರಿಗಿಂತ ಹೆಚ್ಚು ಮಾಡಲು ಏನಾದರೂ ಅವರು ಇಚ್ಛಿಪಟ್ಟರೆ ಅದರ ಬಗ್ಗೆ ಪರಿಶೀಲಿಸಿ ತಾವು ಹೇಳಿದ ಹಾಗೆ ಆಂಧ್ರಪ್ರದೇಶ ಸರ್ಕಾರದೊಡನೆ ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಗೆ ನಮ್ಮ ಆದಾಯವೇ ಜಾಸ್ತಿ ಹೋಗುತ್ತಿದೆ. ನಮ್ಮ ಕೊಡುಗೆಯೇ ಜಾಸ್ತಿ. ಆದ್ದರಿಂದ,ಕನಿಷ್ಠ ಶೇ 40 ಭಾಗವಾದರೂ ಆ ಸಮಿತಿಯಲ್ಲಿ ನಮಗೆ ಅವಕಾಶ ಕೊಡಬೇಕೆಂಬುದು ನಮ್ಮ ಒತ್ತಾಯ.

ಡಾ|| ಎಂ. ಶಂಕರನಾಯಕ್ : ಒತ್ತಾಯ ತಂದು, ಎಷ್ಟು ಕೊಡಲು ಸಾಧ್ಯವೋ ಅಷ್ಟು ಮಾಡುತ್ತೇವೆ.

## ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ

187 - ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆರ್ಥಿಕವಾಗಿ ಸಂಪನ್ಮೂಲಗಳಿಲ್ಲದೆ ಪೂಜೆ ವಿನಿಯೋಗಗಳಿಗೆ ಕಷ್ಟವಾಗಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು? ಅವುಗಳಿಗೆ ಆರ್ಥಿಕ ಶಕ್ತಿ ಕೊಡಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು?*

ಆ) *ದೇವಸ್ಥಾನದ ಅರ್ಚಕರಿಗೆ, ಸಿಬ್ಬಂದಿವರ್ಗದವರುಗಳಿಗೆ ಕನಿಷ್ಠ ವೇತನವನ್ನು ಸರ್ಕಾರ ನಿಗಧಿಪಡಿಸಿದೆಯೇ?*

ಇ) *ಹಾಗಿಲ್ಲದಿದ್ದಲ್ಲಿ ಯಾವಾಗ ನಿಗಧಿ ಪಡಿಸಲಾಗುವುದು?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಗ್ರಾಮಾಂತರ ಪ್ರದೇಶಗಳಲ್ಲಿನ ಆರ್ಥಿಕ ಸಂಪನ್ಮೂಲಗಳಿಲ್ಲದೆ ಸು.24,229 ಧಾರ್ಮಿಕ ಸಂಸ್ಥೆಗಳು ಮತ್ತು ದೇವಾಲಯಗಳಿವೆ. ಉದ್ದೇಶಿತ ಏಕರೂಪ ಮಸೂದೆಯಲ್ಲಿ ಇಂಥ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಒದಗಿಸಲು ಕಾಮನ್‌ಪೂಲ್ ಫಂಡ್ ಎಂಬ ನಿಧಿ ಸ್ಥಾಪಿಸಲು ಅವಕಾಶ ಮಾಡಲಾಗಿದೆ.

ಆ) ಇಲ್ಲ, ಆಯಾ ಕಾಯ್ದೆಗಳಲ್ಲಿ ಸೂಚಿಸಿರುವ ಸಕ್ಷಮ ಪ್ರಾಧಿಕಾರಗಳು ಸ್ಕೇಲನ್ನು (ಆಯವ್ಯಯ) ಅನುಮೋದಿಸುವಾಗ ಆಯಾ ದೇವಸ್ಥಾನದ ಆದಾಯಕ್ಕೆ ಅನುಗುಣವಾಗಿ ಅರ್ಚಕರು ಮತ್ತು ಇತರೆ ಸಿಬ್ಬಂದಿಯವರಿಗೆ ವೇತನ ನಿಗಧಿಪಡಿಸುವರು.

ಇ) - ಪ್ರಶ್ನೆ ಉದ್ಭವಿಸುವುದಿಲ್ಲ -